# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

| ಭಾಗ – ೬–ಬಿ<br>Part – VI-B | ಬೆಳಗಾವಿ, ಶನಿವಾರ, ೦೬ ಜೂನ್, ೨೦೨೬ (ಜ್ಯೇಷ್ಠ ೧೬, ಶಕ ವರ್ಷ ೧೯೪೮)<br>BELAGAVI, SATURDAY, 06 JUNE, 2026 (JYESTHA 16, SHAKA VARSHA 1948) | ನಂ. ೧೩<br>No. 13 |
|---|---|---|

ಕರ್ನಾಟಕ ಸರ್ಕಾರ

Govt of Karnataka

**ಜಿಲ್ಲಾಧಿಕಾರಿಗಳ ಮತ್ತು ಜಿಲ್ಲಾ ಚುನಾವಣಾಧಿಕಾರಿಗಳ ಕಾರ್ಯಾಲಯ, ಬಾಗಲಕೋಟೆ– 587103**

**OFFICE OF THE DEPUTY COMMISSIONER & DISTRICT ELECTION OFFICER, BAGALKOT-587103**

Ph: 08354-235091 Fax:08354-235096 E-Mail: deo.bagalkot@gmail.com

ಸಂಖ್ಯೆ: ಬಿಕೆಟಿ/ಇಎಲ್‌ಎನ್/ಸಿಆರ್–56/2020–21 ದಿನಾಂಕ:03–06–2026

**ಅಂತಿಮ ಅಧಿಸೂಚನೆ**

ಸರ್ಕಾರದ ಅಧಿಸೂಚನೆ ಸಂಖ್ಯೆ ನಅಇ 33 ಎಂಎಲ್‌ಆರ್ 2019 ದಿನಾಂಕ 05–11–2020 ರಂತೆ ಬಾಗಲಕೋಟೆ ಜಿಲ್ಲೆಯ ಬಾಗಲಕೋಟೆ ತಾಲೂಕಿನ ನೀಲಾನಗರ ಗ್ರಾಮ ಪಂಚಾಯತಿ ಪ್ರದೇಶದೊಂದಿಗೆ ನೀಲಾನಗರ ಮತ್ತು ಗುಂಡುನಪಲ್ಲೆ ಗ್ರಾಮಗಳ ಪ್ರದೇಶಗಳನ್ನು ಒಟ್ಟುಗೂಡಿಸಿ ಶಿರೂರ ಪಟ್ಟಣ ಪಂಚಾಯತಿ ರಚನೆಯಾಗಿದ್ದು, ಸರ್ಕಾರದ ಅಧಿಸೂಚನೆ ಸಂಖ್ಯೆ ನಅಇ 187 ಎಂಎಲ್‌ಆರ್ 2021(ಇ) ದಿನಾಂಕ: 01–12–2023 ರಂತೆ ಬಾಗಲಕೋಟೆ ಜಿಲ್ಲೆಯ ಬಾಗಲಕೋಟೆ ತಾಲೂಕಿನ ನೀಲಾನಗರ ಗ್ರಾಮ ಪಂಚಾಯತಿ ಪ್ರದೇಶದ ನೀಲಾನಗರ ಗ್ರಾಮವನ್ನು ಮಾತ್ರ ಶಿರೂರ ಪಟ್ಟಣ ಪಂಚಾಯತಿ ಪ್ರದೇಶದಿಂದ ಕೈಬಿಡಲಾಗಿರುತ್ತದೆ.

ಬಾಗಲಕೋಟೆ ತಾಲೂಕಿನ ಶಿರೂರ ಪಟ್ಟಣ ಪಂಚಾಯತಿ ಪ್ರದೇಶದಿಂದ ಕೈಬಿಡಲಾಗಿರುವ ನೀಲಾನಗರ ಗ್ರಾಮವನ್ನು ಗ್ರಾಮ ಪಂಚಾಯತಿಗೆ ಸೇರ್ಪಡೆ ಕುರಿತು ದಿನಾಂಕ:11–05–2026ರಂದು ಈ ಕಾರ್ಯಾಲಯದಿಂದ ಅಧಿಸೂಚನೆ ಹೊರಡಿಸಲಾಗಿದ್ದು, ಸದರಿ ಗ್ರಾಮ ಪಂಚಾಯತಿ ಕುರಿತು ಯಾವುದೇ ಆಕ್ಷೇಪಣೆಗಳು ಸ್ವೀಕೃತಿಯಾಗಿರುವುದಿಲ್ಲ ಹಾಗೂ ಯಾವುದೇ ಪುನರೀಕ್ಷಣಾ ಅರ್ಜಿ ಕೂಡಾ ಬಾಕಿ ಇರುವುದಿಲ್ಲ.

ಸರ್ಕಾರದ ಪತ್ರ ಸಂಖ್ಯೆ ಗ್ರಾಅಪ 445 ಗ್ರಾಪಂಅ 2023 (ಇ–ಆಫೀಸ್) ದಿನಾಂಕ:02–01–2025ರ ನೀಲಾನಗರ ತಾಂಡ ಗ್ರಾಮ ಪಂಚಾಯತಿಯನ್ನು ಮುಂದುವರೆಸಲು ಅನುಮತಿಸಲಾಗಿದ್ದು ಹಾಗೂ ಕರ್ನಾಟಕ

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment **WPP No. 297**



ಪಂಚಾಯತ್ ರಾಜ್ ಸೀಮಾ ನಿರ್ಣಯ ಆಯೋಗದ ಸುತ್ತೋಲೆ ಸಂಖ್ಯೆ ಕಪಂಸೀನಿಆ/01/ಮಾಸೂ/2025 ದಿನಾಂಕ:18–03–2026 ರಲ್ಲಿನ ನಿರ್ದೇಶನದಂತೆ, ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ 4ನೇ ಪ್ರಕರಣದ 2ನೇ ಉಪ ಪ್ರಕರಣದಿಂದ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಬಾಗಲಕೋಟೆ ಜಿಲ್ಲೆಯ ಜಿಲ್ಲಾಧಿಕಾರಿ ಸಂಗಪ್ಪ ಭಾ.ಆ.ಸೇ. ಆದ ನಾನು ಬಾಗಲಕೋಟೆ ತಾಲೂಕಿನ ನೀಲಾನಗರ ಗ್ರಾಮ ಪಂಚಾಯತಿಗೆ ಈ ಕೆಳಕಂಡ ಕೋಷ್ಟಕದ 3ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಿರುವ ಗ್ರಾಮ/ಪ್ರದೇಶವನ್ನು 2ನೇ ಅಂಕಣದ ಗ್ರಾಮ ಪಂಚಾಯತಿಗೆ ಒಳಪಡುತ್ತವೆ ಎಂದು ಸಾರ್ವಜನಿಕ ಮಾಹಿತಿಗಾಗಿ ಪ್ರಕಟಿಸಲಾಗಿದೆ.

**ಕೋಷ್ಟಕ**

**ತಾಲೂಕು:ಬಾಗಲಕೋಟೆ**

| ಕ್ರ.ಸಂ | ಗ್ರಾಮ ಪಂಚಾಯತಿ ಹೆಸರು | ಗ್ರಾಮ ಪಂಚಾಯತಿ ವ್ಯಾಪ್ತಿಗೆ ಒಳಪಡುವ ಗ್ರಾಮಗಳು |
|---|---|---|
| **1** | **2** | **3** |
| 1 | ನೀಲಾನಗರ | ನೀಲಾನಗರ |

ಜಿಲ್ಲಾಧಿಕಾರಿಗಳು, ಬಾಗಲಕೋಟೆ

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಸರ್ಕಾರಿ ವಿಭಾಗೀಯ ಮುದ್ರಣಾಲಯ, ಧಾರವಾಡ.